ಆರ್‌ಬಿಐ/2007–08/308
ಡಿಬಿಓಡಿ.ಸಂ.ಎಲ್‌ಇಜಿ.ಬಿಸಿ 80/09.07.005/2007–08

ಮೇ 2, 2008

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಆರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೆ,

**ಕಾಣೆಯಾದ ವ್ಯಕ್ತಿಗಳ ಬಗ್ಗೆ ಹಕ್ಕುಸಾಧನೆ ಇತ್ಯರ್ಥ**

ಕಾಣೆಯಾದ ವ್ಯಕ್ತಿಗಳ ಬಗ್ಗೆ ನಾಮ ನಿರ್ದೇಶಿತ/ ಕಾನೂನುಬದ್ಧ ವಾರಸುದಾರರಿಂದ ಹಕ್ಕು ಸಾಧನೆ ಇತ್ಯರ್ಥಕ್ಕಾಗಿ ಕ್ಲೇಮ್ ಸ್ವೀಕರಿಸಿದ್ದ ಪಕ್ಷದಲ್ಲಿ ಬ್ಯಾಂಕುಗಳು ಯಾವ ಕ್ರಮವನ್ನು ಪಾಲಿಸಬೇಕೆಂಬ ಪ್ರಶ್ನೆಯನ್ನು ಎತ್ತಲಾಗಿದೆ.

2. ಕಾಣೆಯಾದ ವ್ಯಕ್ತಿಗಳ ಸಂಬಂಧ ಹಕ್ಕುಗಳ ಇತ್ಯರ್ಥವನ್ನು ಭಾರತೀಯ ಸಾಕ್ಷ್ಯ ಕಾಯಿದೆ 1872ರ ಪ್ರಕರಣ 107/108ರ ಉಪಬಂಧಗಳಿಗೆ ಒಳಪಟ್ಟಿರುತ್ತದೆ. ಪ್ರಕರಣ 107 ಬದುಕಿದ್ದಾರೆಂಬ ಭಾವನೆ ಮತ್ತು ಪ್ರಕರಣ 108 ಮೃತರಾಗಿದ್ದಾರೆಂಬ ಭಾವನೆಯ ಬಗ್ಗೆ ಹೇಳುತ್ತವೆ. ಭಾರತೀಯ ಸಾಕ್ಷ್ಯ ಕಾಯಿದೆ, ಪ್ರಕರಣ 108ರ ಉಪಬಂಧಗಳಂತೆ, ಅವನು/ಅವಳು ಕಾಣೆಯಾದ ವಿಚಾರವನ್ನು ವರದಿಮಾಡಿದ ದಿನಾಂಕದಿಂದ 7 ವರ್ಷಗಳ ನಂತರ ಮಾತ್ರ ಮರಣಹೊಂದಿರಬಹುದೆಂದು ಭಾವಿಸಬಹುದು. ಅದರಂತೆ, ಭಾರತೀಯ ಸಾಕ್ಷ್ಯ ಕಾಯಿದೆ ಪ್ರಕರಣ 107/108ರಂತೆ, ನಾಮನಿರ್ದೇಶಿತ/ ಕಾನೂನುಬದ್ಧ ವಾರಸುದಾರರು, ಚಂದಾದಾರರು ಮೃತಪಟ್ಟಿದ್ದಾರೆಂಬ ಭಾವನೆಯನ್ನು ಸಕ್ಷಮ ನ್ಯಾಯಾಲಯದ ಮುಂದೆ ಹೇಳಿಕೆ ಮೂಲಕ ವ್ಯಕ್ತಪಡಿಸಬೇಕು. ಆಕೆ/ ಆತ ಮರಣಹೊಂದಿದ್ದಾನೆ/ಳೆಂದು ಕೋರ್ಟ್ ಭಾವಿಸಿದರೆ ಅದೇ ಅಧಾರದ ಮೇಲೆ ಕಾಣೆಯಾದ ವ್ಯಕ್ತಿಯ ಸಂಬಂಧ ಹಕ್ಕುಗಳನ್ನು ಇತ್ಯರ್ಥ ಮಾಡಬಹುದು.

3. ಪ್ರತಿಯೊಂದು ಮೊಕದ್ದಮೆಯ ಸಂಗತಿ ಸಂದರ್ಭಗಳನ್ನು ಗಣನೆಗೆ ತೆಗೆದುಕೊಂಡು, ಕಾನೂನಿನ ಸಲಹೆಯಂತೆ ಕಾಣೆಯಾದ ವ್ಯಕ್ತಿಯ ಹಕ್ಕುಗಳನ್ನು ಇತ್ಯರ್ಥಮಾಡಲು ನೀತಿಯೊಂದನ್ನು ಬ್ಯಾಂಕುಗಳು ರೂಪಿಸಿಕೊಳ್ಳಬೇಕೆಂದು ಅವುಗಳಿಗೆ ಸೂಚಿಸಲಾಗಿದೆ. ಮುಂದುವರಿದಂತೆ, ಸಾರ್ವಜನಿಕರ ಅನಾನುಕೂಲ ಮತ್ತು ಅನಗತ್ಯ ಕಷ್ಟನಿವಾರಣೆಯನ್ನು ದೃಷ್ಟಿಯಲ್ಲಿರಿಸಿ, ಬ್ಯಾಂಕುಗಳು ತಮ್ಮ ನಷ್ಟ ನಿರ್ವಹಣಾ ಪದ್ಧತಿಯನ್ನೂ ಗಮನದಲ್ಲಿರಿಸಿ (i) ಎಫ್‌ಐಆರ್ ಹಾಗೂ ಪತ್ತೆಯಾಗಲಿಲ್ಲವೆಂಬ ವರದಿ ಮತ್ತು (ii) ನಷ್ಟಭರ್ತಿ ಭರವಸೆ ಪತ್ರದ ದಾಖಲೆಗಳನ್ನು ಹೊರತುಪಡಿಸಿ ಇನ್ನಾವುದೇ ದಾಖಲೆಗಳನ್ನು ನೀಡಲು ಒತ್ತಾಯಿಸದೇ, ಕಾಣೆಯಾದ ವ್ಯಕ್ತಿಗಳ ಹಕ್ಕು–ಸಾಧನೆ ಇತ್ಯರ್ಥಮಾಡಲು ಅರಂಭಿಕ ಮಿತಿಯನ್ನೂ ಬ್ಯಾಂಕುಗಳು ನಿರ್ಧರಿಸಬಹುದು.

ನಿಮ್ಮ ವಿಶ್ವಾಸಿ

(ಪ್ರಶಾಂತ್ ಸರನ್)
ಮುಖ್ಯ ಮಹಾ ವ್ಯವಸ್ಥಾಪಕರು– ಪ್ರಭಾರಿ